**ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ವಿಭಾಗ ಕಛೇರಿ
ಚಾವಿಸನಿನಿ, ಚನ್ನರಾಯಪಟ್ಟಣ-573116
ದೂರವಾಣಿ ಸಂಖ್ಯೆ: 08176-252439

**CHAMUNDESHWARI ELECTRICITY SUPPLY CORPORATION LIMITED**
**(A Government of Karnataka Undertaking)**
**Division Office,**
**CESC, Channarayapatna**
**Web Site: www.cescmysore.org**
E-mail ID: eeecrp@cescmysore.org
cesccrp1@gmail.com

**Company Identity Number [CIN]:-U40109KA2004SGC035177**

ಸಂಖ್ಯೆ: ಕಾ.ನಿ.ಇಂ(ವಿ)/ಸ.ಕಾ.ಇಂ(ಕ)/ಸ.ಇಂ(ತಾ)/21-22/ ದಿನಾಂಕ:

ಗೆ,

ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ)
ಚಾವಿಸನಿನಿ ವಿಭಾಗೀಯ ಕಛೇರಿ
ಚನ್ನರಾಯಪಟ್ಟಣ

ಮಾನ್ಯರೆ,

ವಿಷಯ:- ಚ.ರಾ ಪಟ್ಟಣ ಯೋಜನಾ ಪ್ರಾಧಿಕಾರಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವ ಸಂಬಂಧ

ಉಲ್ಲೇಖ:-
1. ಸದಸ್ಯ ಕಾರ್ಯದರ್ಶಿ ಯೋಜನಾ ಪ್ರಾಧಿಕಾರ ಇವರ ಪತ್ರ ಸಂಖ್ಯೆ: ಸ್ಥ.ಯೋ.ಪ್ರಾ.ಚ.ರಾ.ಪ:ಕಟ್ಟಡ ನಕ್ಷೆ:01:2017-18, ದಿನಾಂಕ: 17-05-2017, 17-10-2017, 23-01-2018, 24-02-2018, 08-03-2018 ಮತ್ತು 14-03-2018
2. ಅಧೀಕ್ಷಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಹಾಸನ ವೃತ್ತ, ಹಾಸನ ರವರ ಪತ್ರ ಸಂಖ್ಯೆ: ಸೂಇಂ:ಲೋಇ:ಹಾವೃ:ಎಇ-2:ತಾಂ.ಪ:2017-18:1273, ದಿನಾಂಕ: 25-09-2017
3. ಸ್ಥ.ಯೋ.ಪ್ರಾ.:ಚ.ರಾ.ಪ.ಕಟ್ಟಡ:01-2019-20, ದಿನಾಂಕ: 29-05-2019
4. ಸ್ಥಳೀಯ ಯೋಜನಾ ಪ್ರಾಧಿಕಾರ ಪತ್ರ ಸಂಖ್ಯೆ: ಸ.ಕಾ.ಇಂ/ಲೋ.ಇ.ವಿ/ಹಾಸನ/ಕಿ.ಇಂ:3:18-19 159, ದಿನಾಂಕ: 25-04-2019
5. CNR-LBPAS-10116-19-20/BP DATE : 15-09-2020

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಅವಗಾಹನೆಗೆ ತರಬಯಸುವುದೇನೆಂದರೆ, ಸದಸ್ಯ ಕಾರ್ಯದರ್ಶಿ ಚನ್ನರಾಯಪಟ್ಟನ ಯೋಜನಾ ಪ್ರಾಧಿಕಾರ ಚನ್ನರಾಯಪಟ್ಟಣ ರವರು ಉಲ್ಲೇಖ ರ ಅನ್ವಯ ತಮ್ಮ ಕಛೇರಿಗೆ ಪತ್ರ ಬರೆದು ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಮನವಿ ಮಾಡಿರುತ್ತಾರೆ. ಅದರಂತೆಯೇ ಸ್ಥಳ ಪರಿಶೀಲಿಸಿದ ಸಂದರ್ಭದಲ್ಲಿ ಹಾಗೂ ವಸತಿ ನಿವೇಶನಗಳ ವಾರಸುದಾರರು ನೀಡಿರುವ ಉಲ್ಲೇಖಿತ 2 ಅನುಸಾರ ಸಲ್ಲಿಸಿರುವ ಪರಿವರ್ತನಾ ಯೋಗ್ಯತಾ ಪತ್ರ ಉಲ್ಲೇಖ-3 ರನ್ವಯ ಪರಿತ್ಯಾಜನಾ ಪತ್ರವನ್ನು ಪರಾಮರ್ಶಿಸಿದಾಗ ಕಂಡು ಬರುವ ಅಂಶವೇನೆಂದರೆ ಶ್ರೀ ಕೆ.ಎ.ಪ್ರಕಾಶ್ ಬಿನ್ ಲೇ|| ಅಯ್ಯಣ್ಣರವರ ಹೆಸರಿನಲ್ಲಿ ಒಟ್ಟಾರೆ 4-25 1/2 ಎಕ್ಕರೆ ಜಮೀನಿದ್ದು, ಸರ್ವೆ ನಂ 34/2 ರಲ್ಲಿ 3-5 1/2 ಮತ್ತು ಸರ್ವೆ ನಂ 35 ರಲ್ಲಿ 1-20 ಎಕ್ಕರೆ ಜಮೀನನ್ನು ಮೇಲ್ಕಂಡ ಉಲ್ಲೇಖಿತ ಪರಿವರ್ತನಾ ಯೋಗ್ಯತಾ ಪತ್ರದಂತೆ ವಸತಿ ವಿನ್ಯಾಸದಲ್ಲಿ ನಾಗರೀಕ ಸೌಲಭ್ಯ, ಉದ್ಯಾನ ವನ ರಸ್ತೆಗಳಗಾಗಿ ಖಾಯ್ದಿರಿಸಿರುವ ಜಾಗಗಳನ್ನು ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದ ಆದೇಶ ಸಂಖ್ಯೆ: 96/2012-13, ದಿನಾಂಕ: 02-04-2013 ರಲ್ಲಿ ವಸತಿ ಉದ್ದೇಶಕ್ಕೆ Layout Planning ಅನ್ನು ಅನಮೋದಿಸಿರಲಾಗಿರುತ್ತದೆ.

ಮುಂದುವರೆದು ಉಲ್ಲೇಖಿತ ರನ್ವಯ ಕಟ್ಟಸ ಪರವಾನಗಿ ಪಡೆದು ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ರವರ ಆಢಳಿತಾತ್ಮಕ ಅನುಮೋದನೆ ಮೇರೆಗೆ ಹಾಗೂ ಉಲ್ಲೇಖಿತ ಪತ್ರ ರನ್ವಯ ಕಟ್ಟಡ ಪರವಾನಗಿಯ ಮೇರೆಗೆ ಪುರಸಭಾ ಖಾತೆ ಎಸ್‌ಎಎಸ್-837 ರಲ್ಲಿ ನಾಗರೀಕ ಸೌಲಭ್ಯಗಳಿಗೆ ಮೀಸಲಿಟ್ಟಿದ್ದ 1440.88

ಚ.ಮೀ ವಿಸ್ತೀರ್ಣದ ಜಾಗದಲ್ಲಿ 657.96 ಚ.ಮೀ ವಿಸ್ತೀರ್ಣದ ನೆಲ ಅಂತಸ್ತಿನ ಕಟ್ಟಡವನ್ನು ಚನ್ನರಾಯಪಟ್ಟಣ ಯೋಜನಾ ಪ್ರಾಧಿಕಾರದ ಕಛೇರಿಗಾಗಿ ನಿರ್ಮಿಸಿ ಸರ್ಕಾರಿ ಕಟ್ಟಡಗಳಿಗೆ ಶಾಶ್ವತ ವಿದ್ಯುಚ್ಛಕ್ತಿ ಸಂಪರ್ಕ ಕಲ್ಪಿಸುವ ರೀತಿ ಪ್ರತ್ಯೇಕವಾಗಿ ವಿದ್ಯುಚ್ಛಕ್ತಿ ಸಂಪರ್ಕವನ್ನು ಕಲ್ಪಿಸಲು ಮನವಿ ಮಾಡಿರುವ ಸದಸ್ಯ ಕಾರ್ಯದರ್ಶಿ ಪ್ರಾಧಿಕಾರ ರವರ ಮನವಿಯಂತೆ ಚಾವಿಸನಿನಿ ರವರ ಸಕ್ಷಮ ಪ್ರಾಧಿಕಾರ ಆಢಳಿತಾತ್ಮಕ ಅನುಮೋದನೆಗೆ ಈ ಮೂಲಕ ಸಮುಚಿತ ಮಾರ್ಗದಲ್ಲಿ ಸಲ್ಲಿಸಲಾಗಿದೆ.

**ತಮ್ಮ ವಿಶ್ವಾಸಿ,**

**ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ),**
**ಸೆಸ್ಕ್, ಉಪ ವಿಭಾಗೀಯ ಕಛೇರಿ**
**ಚನ್ನರಾಯಪಟ್ಟಣ.**